# ಜ್ಞಾನ

**ಭಗವಂತನೊಬ್ಬನೇ ಸತ್** ಉಳಿದುದೆಲ್ಲ ಅಸತ್ ಎಂದು ಅರಿತುಕೊಳ್ಳುವುದಕ್ಕೆ ಮತ್ತು ಒಬ್ಬನೇ ಭಗವಂತ ಸರ್ವಭೂತಗಳಲ್ಲಿ ಇದ್ದಾನೆ ಎಂಬ ದೃಗ್ ಬುದ್ಧಿಗೆ "ಜ್ಞಾನ" ಅಂತ ಹೆಸರು. ಸ್ವಸ್ವರೂಪವನ್ನು ಅರಿತುಕೊಳ್ಳುವುದು ಮತ್ತು ಅದರಲ್ಲೇ ಮನಸ್ಸನ್ನಿಡುವುದು. ಈ ಶುದ್ಧ ಆತ್ಮವೇ ನಮ್ಮ ಸ್ವರೂಪವೆಂದು ಅರಿತುಕೊಳ್ಳಬೇಕು.

ಮನುಷ್ಯನ ಅಂತರ್ಯದಲ್ಲಿ ಭಗವಂತನ ದರ್ಶನ ಮಾಡಲು ಸಾಧ್ಯವಾಯಿತು ಎಂದರೆ, ಪೂರ್ಣಜ್ಞಾನ ದೊರೆತಂತೆಯೆ.

ಅಹಂಕಾರ ಹೋಗದ ಹೊರತು ಜ್ಞಾನ ದೊರಕದು. 'ನಾನು' 'ನನ್ನದು' ಎಂಬುದೇ ಅಜ್ಞಾನ. ನೀನು ' 'ನಿನ್ನದು' ಎಂಬುದೇ ಜ್ಞಾನ.

ನಿತ್ಯವನ್ನು ಮುಟ್ಟುವುದರ ಹೆಸರೇ ಬ್ರಹ್ಮಜ್ಞಾನ. ಸಂಪೂರ್ಣವಾಗಿ ವಿಷಯಬುದ್ಧಿ ಹೋಗದ ಹೊರತು ಅದು ದೊರೆಯುವುದಿಲ್ಲ.

ಆತ ಒಡೆಯ, ಈ ಜಗತ್ತು ಆತನ ತೋಟ, ಈ ಇಡೀ ಜೀವಜಗತ್ತು ಆತನಿಗೇ ಸೇರಿದುದು ' —ಇದಕ್ಕೂ ಜ್ಞಾನ ಅಂತ ಹೆಸರು. 'ಇದು ನನ್ನ ಮನೆ ; ಇದು ನನ್ನ ಸಂಸಾರ ; ಇದು ನನ್ನ ಧನ; ಇವರು ನನ್ನ ಬಂಧು ಬಾಂಧವರು'— ಈ ಭಾವನೆಯೇ ಅಜ್ಞಾನ.

ಕಾಲಿಗೆ ಮುಳ್ಳು ಚುಚ್ಚಿಕೊಂಡರೆ ಅದನ್ನು ತೆಗೆಯಲು ಬೇರೊಂದು ಮುಳ್ಳು ಬೇಕಾಗುತ್ತದೆ. ಮುಳ್ಳನ್ನು ತೆಗೆದ ನಂತರ ಎರಡು ಮುಳ್ಳನ್ನೂ ಬಿಸಾಡಿಬಿಡುತ್ತೇವೆ. ಅದೇ ರೀತಿಯಾಗಿ ಅಜ್ಞಾನ ಎಂಬ ಮುಳ್ಳನ್ನು ತೆಗೆದುಹಾಕಲು ಜ್ಞಾನವೆಂಬ ಮುಳ್ಳನ್ನು ಮೊದಲು ಪಡೆದುಕೊಳ್ಳಬೇಕು. ಬಳಿಕ ಎರಡು ಮುಳ್ಳನ್ನೂ ಬಿಸಾಡಬೇಕಾಗುತ್ತದೆ. ಆತ ಜ್ಞಾನಾಜ್ಞಾನಗಳಿಗೆ ಅತೀತ.

ಎಲ್ಲಿಯವರೆಗೆ "ಭಗವಂತ ಕರ್ತ" ಎಂಬ ಜ್ಞಾನೋದಯ ವಾಗುವುದಿಲ್ಲವೋ, ಅಲ್ಲಿಯವರೆಗೆ ಮತ್ತೆ ಮತ್ತೆ ಈ ಜಗತ್ತಿಗೆ ಬರಲೇಬೇಕಾಗುತ್ತದೆ, ಮತ್ತೆ ಮತ್ತೆ ಜನ್ಮವೆತ್ತಬೇಕಾಗುತ್ತದೆ. "ಭಗವಂತ ಕರ್ತ" ಎಂಬ ಜ್ಞಾನೋದಯವಾಗಿಬಿಟ್ಟರೆ ಮತ್ತೆ ಜನ್ಮವೆತ್ತಬೇಕಾಗಿರುವುದಿಲ್ಲ.

ಜ್ಞಾನಲಾಭಕ್ಕೆ ಮುಖ್ಯವಾಗಿ ಎರಡು ಲಕ್ಷಣಗಳಿವೆ— ಮೊದಲನೆಯದು ಅನುರಾಗ ಅಂದರೆ ಭಗವಂತನನ್ನು ಪ್ರೀತಿಸುವುದು. ಬರಿದೆ ಜ್ಞಾನವಿಚಾರವನ್ನೇನೊ ಮಾಡು ತ್ತಿರಬಹುದು. ಆದರೆ ಭಗವಂತನಲ್ಲಿ ಅನುರಾಗವಿಲ್ಲದಿದ್ದರೆ, ಪ್ರೀತಿ ಇಲ್ಲದಿದ್ದರೆ ಅದು ವಿಫಲ. ಇನ್ನೊಂದು ಲಕ್ಷಣ ಕುಲ ಕುಂಡಲಿನೀಶಕ್ತಿ ಎಚ್ಚರಗೊಳ್ಳುವಿಕೆ. ಕುಲಕುಂಡಲಿನಿ ಎಲ್ಲಿಯ ವರೆಗೆ ನಿದ್ರಿಸುವುದೊ ಅಲ್ಲಿಯವರೆಗೆ ಜ್ಞಾನ ದೊರಕದು. ಘಂಟೆಗಳ ಕಾಲ ಕುಳಿತು ಶಾಸ್ತ್ರವನ್ನು ಓದುತ್ತಿರಬಹುದು. ವಿಚಾರ ಮಾಡುತ್ತಿರಬಹುದು. ಆದರೆ ಅಂತರ್ಯದಲ್ಲಿ ವ್ಯಾಕುಲತೆಯಿಲ್ಲದಿದ್ದರೆ ಅದು ಜ್ಞಾನ ದೊರಕುವ ಲಕ್ಷಣವಲ್ಲ.

ಜ್ಞಾನಿಗೆ ಕೆಲವು ಲಕ್ಷಣಗಳಿವೆ—ಜ್ಞಾನಿ ಯಾರಿಗೂ ತೊಂದರೆ ತರಲಾರ. ಬಾಲಕನಂತಾಗಿಬಿಡುತ್ತಾನೆ.

ದೂರದಿಂದ ನೆಲದ ಮೇಲೆ ಬಿದ್ದಿರುವ ಸುಟ್ಟ ಹಗ್ಗ ನಿಜವಾದ ಹಗ್ಗದ ಹಾಗೆ ತೋರಿಬರುತ್ತದೆ. ಆದರೆ ಹತ್ತಿರ ಬಂದು "ಫೂ" ಎಂದು ಊದಿದರೆ ಎಲ್ಲಾ ಹಾರಿಹೋಗಿಬಿಡು ತ್ತದೆ. ಅದೇ ರೀತಿಯಾಗಿ ಜ್ಞಾನಿಯ ಕ್ರೋಧ, ಅಹಂಕಾರ ಕೇವಲ ತೋರಿಕೆಗಳು ಮಾತ್ರ; ಅವು ನಿಜವಾದುವಲ್ಲ.

ಮಗುವಿಗೆ ಮಮಕಾರವಿಲ್ಲ. ಅದು ಮನೆಯನ್ನು ಕಟ್ಟುತ್ತದೆ. ಯಾರಾದರೂ ಅದನ್ನು ಒಂದು ಸ್ವಲ್ಪ ಮುಟ್ಟಿದರೆ ಸಾಕು "ಹೋ" ಎಂದು ಆಕಾಶಕ್ಕೂ ಭೂಮಿಗೂ ನೆಗೆಯುತ್ತಾ ಅಳಲಾರಂಭಿಸುತ್ತದೆ. ಮರುಕ್ಷಣ ತಾನೇ ಎಲ್ಲವನ್ನೂ ನೆಲಸಮ ಮಾಡಿಬಿಡುತ್ತದೆ. ಈ ಕ್ಷಣದಲ್ಲಿ ಅದು ತನ್ನ ಬಟ್ಟೆಯ ಮೇಲೆ ಅಷ್ಟೊಂದು ಮಮತೆಯನ್ನು ತೋರಿಸ ಬಹುದು. ಅದು ಹೇಳುತ್ತದೆ: "ನಮ್ಮ ಅಪ್ಪ ತಂದು ಕೊಟ್ಟಿದ್ದಾನೆ. ಯಾರಿಗೂ ಕೊಡುವುದಿಲ್ಲ!" ಎಂದು. ಮರುಕ್ಷಣ ಅದರ ಕೈಗೊಂದು ಬೊಂಬೆ ಕೊಟ್ಟರೆ ಸಾಕು ಎಲ್ಲವನ್ನೂ ಮರೆತುಬಿಡುತ್ತದೆ. ಬಟ್ಟೆಯನ್ನು ಒಂದು ಕಡೆ ಬಿಸಾಡಿ ಹೊರಟು ಹೋಗುತ್ತದೆ. ಇವೆಲ್ಲ ಜ್ಞಾನಿಯ ಲಕ್ಷಣ.

ಸಂಸಾರಿಜೀವರ ಜ್ಞಾನ, ಭಕ್ತರ ಜ್ಞಾನ, ಅವತಾರಪುರುಷರ ಜ್ಞಾನ ಒಂದೇ ಸಮವಾದುವಲ್ಲ. ಸಂಸಾರಿಜೀವರ ಜ್ಞಾನ ಒಂದು ಹಣತೆಯ ಬೆಳಕು ಇದ್ದಹಾಗೆ—ಮನೆಯ ಒಳಪ್ರದೇಶ ಮಾತ್ರ ಬೆಳಕಾಗುತ್ತದೆ. ಆ ಬೆಳಕಿನಿಂದ ಊಟ, ಮನೆಗೆಲಸ, ಶರೀರರಕ್ಷಣೆ ಇತ್ಯಾದಿ ಸಾಧ್ಯ.

ಭಕ್ತರ ಬೆಳಕು ಚಂದ್ರನ ಬೆಳಕು ಇದ್ದಹಾಗೆ. ಅದು ಮನೆಯ ಒಳಗೆ ಹೊರಗೆ ಇರುವುದನ್ನೆಲ್ಲ ಪ್ರಕಾಶಗೊಳಿಸುತ್ತದೆ. ಆದರೆ ಬಹಳ ದೂರದಲ್ಲಿರುವ ವಸ್ತುಗಳನ್ನು ಅಥವಾ ಬಹಳ ಪುಟ್ಟ ವಸ್ತುಗಳನ್ನು ಆ ಬೆಳಕಿನಿಂದ ನೋಡಲಾಗುವುದಿಲ್ಲ.

ಅವತಾರಾದಿಗಳ ಬೆಳಕು ಸೂರ್ಯನ ಬೆಳಕು ಇದ್ದ ಹಾಗೆ. ಒಳಗೆ ಹೊರಗೆ, ದೊಡ್ಡದು ಚಿಕ್ಕದು—ಎಲ್ಲವನ್ನೂ ಅವರು ನೋಡಬಲ್ಲರು.

ರಾಮಕೃಷ್ಣ ವಚನವೇದ